# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 507 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 10.07.2023 |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಚಿಕ್ಕಮಗಳೂರು ಜಿಲ್ಲೆ ಆಲೂರು ಅರಣ್ಯವಲಯ ವ್ಯಾಪ್ತಿಯಲ್ಲಿ ಪದೇ ಪದೇ ಕಾಡಾನೆಗಳು ದಾಳಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಚಿಕ್ಕಮಗಳೂರು ಜಿಲ್ಲೆ ಆಲೂರು ಅರಣ್ಯವಲಯ ವ್ಯಾಪ್ತಿಯಲ್ಲಿ ಪದೇ ಪದೇ ಕಾಡಾನೆಗಳು ದಾಳಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಕಾಡಾನೆಗಳ ದಾಳಿಯಿಂದ ಬೆಳೆ ಹಾಗೂ ದನಕರುಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಕಳೆದ 3 ವರ್ಷಗಳಿಂದ ಕಾಡಾನೆಗಳ ದಾಳಿಯಿಂದ ಹಾನಿಗೆ ಒಳಗಾದ ಕೃಷಿ ಪ್ರದೇಶಗಳಾವುವು; ಅವುಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ, ಪರಿಹಾರ ನೀಡದೆ ಬಾಕಿ ಇರುವ ಪ್ರದೇಶಗಳಾವುವು? (ಸಂಪೂರ್ಣ ವಿವರ ನೀಡುವುದು) | ಚಿಕ್ಕಮಗಳೂರು ವಿಭಾಗದಲ್ಲಿ ಕಾಡಾನೆಗಳ ದಾಳಿಯಿಂದ ಬೆಳೆ ಹಾಗೂ ದನಕರುಗಳನ್ನು ರಕ್ಷಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ಸರ್ಕಾರದ ಆದೇಶ ಸಂಖ್ಯೆ: ಅಪಜೀ/170/ಎಫ್.ಡಬ್ಲ್ಯೂ.ಎಲ್-2022/ ದಿನಾಂಕ: 21.11.2022 ರನ್ವಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಅಧಿಕಾರಿ / ಸಿಬ್ಬಂದಿಗಳನ್ನು ಒಳಗೊಂಡ ಆನೆ ಕಾರ್ಯಪಡೆ (Elephant Task Force) ನ್ನು ರಚಿಸಲಾಗಿದೆ. ಅದರನ್ವಯ ಮೂಡಿಗೆರೆ ಕೇಂದ್ರಸ್ಥಾನದೊಂದಿಗೆ ಆನೆ ಕಾರ್ಯಪಡೆಯು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದೆ.<br>2. ಜನವಸತಿ ಹಾಗೂ ಕೃಷಿ ಪ್ರದೇಶಕ್ಕೆ ಬಾರದಿರುವಂತೆ ಆನೆ ನಿರೋಧಕ ಕಂದಕ, ಸೋಲಾರ್ ತಂತಿಬೇಲಿ, ಟೆಂಟಿಕಲ್ ಫೆನ್ಸಿಂಗ್, ಆರ್.ಸಿ.ಸಿ. ಪಿಲ್ಲರ್‌ಗಳು ಇತ್ಯಾದಿಗಳನ್ನು ನಿರ್ಮಿಸಲಾಗಿದೆ.<br>3. ರೈತರ ಹಿಡುವಳಿ ಜಮೀನಿಗೆ ಕಾಡಾನೆ ಹಾವಳಿ ತಡೆಗಟ್ಟಲು ಸೋಲಾರ್ ತಂತಿಬೇಲಿ ನಿರ್ಮಾಣ ಮಾಡಲು ಸಹಾಯ ಧನ ಮಂಜೂರು ಮಾಡಲಾಗಿರುತ್ತದೆ.<br>4. ಸಾರ್ವಜನಿಕರ ಬೆಳೆಹಾನಿ, ಆಸ್ತಿಪಾಸ್ತಿ ರಕ್ಷಿಸಲು ಶೆಲ್ಟರ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಪ್ರತೀ ವಲಯದಲ್ಲಿ ಆನೆ ಓಡಿಸುವ ತಂಡ ಮತ್ತು ಕಳ್ಳಬೇಟೆ ನಿಯಂತ್ರಣ ತಂಡವನ್ನು ರಚಿಸಿದ್ದು, ಪ್ರತಿ ದಿನ ರಕ್ಷಣಾ ಕಾರ್ಯ ನಿರ್ವಹಿಸಲಾಗುತ್ತಿರುತ್ತದೆ. ಜೊತೆಗೆ ಕಾಡಾನೆಗಳು ಕಂಡುಬಂದ ಸ್ಥಳದಿಂದ ಅವುಗಳನ್ನು ಕಾಡಿಗೆ ಹಿಮ್ಮೆಟ್ಟಿಸಲು ಇಲಾಖಾ ಸಿಬ್ಬಂದಿಗಳು ಹಾಗೂ ನುರಿತ ಸ್ಥಳೀಯ ಜನರ ಸಹಕಾರ ಪಡೆದು ಕಾಡಿಗೆ ಓಡಿಸುವ ಕೆಲಸ ಪ್ರಗತಿಯಲ್ಲಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |

5. ಕಾಡಾನೆ ಹಾವಳಿ ಪ್ರದೇಶಗಳ ರೈತರಿಗೆ ಪಟಾಕಿಗಳನ್ನು ಹಾಗೂ ಟಾರ್ಚ್ ಗಳನ್ನು ಉಚಿತವಾಗಿ ಒದಗಿಸಲಾಗಿರುತ್ತದೆ.
6. ಕಾಡಾನೆಗಳು ಅರಣ್ಯದಂಚಿನ ಹಿಡುವಳಿ ಪ್ರದೇಶಗಳಿಗೆ ನುಗ್ಗದಂತೆ ಅವುಗಳಿಗೆ ಕುಡಿಯುವ ನೀರಿಗಾಗಿ ಅರಣ್ಯದ ಪ್ರದೇಶಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಕೆರೆಗಳನ್ನು ನಿರ್ಮಿಸಲಾಗಿರುತ್ತದೆ.

ಚಿಕ್ಕಮಗಳೂರು ವಿಭಾಗದ ಮೂಡಿಗೆರೆ, ಆಲ್ದೂರು, ಮುತ್ತೋಡಿ ಮತ್ತು ಚಿಕ್ಕಮಗಳೂರು ವಲಯಗಳ ಪ್ರದೇಶಗಳಲ್ಲಿ ಕಾಡಾನೆ ಹಾವಳಿ ಇದ್ದು, ಕಾಡಾನೆ ದಾಳಿಯಿಂದ ಹಾನಿಗೆ ಒಳಗಾದ ಕೃಷಿ ಪ್ರದೇಶಗಳ ಸಂತ್ರಸ್ಥರಿಗೆ ಅನುದಾನ ಲಭ್ಯತೆಯ ಆಧಾರದ ಮೇರೆಗೆ ಪರಿಹಾರ ವಿತರಿಸಲಾಗಿರುತ್ತದೆ.

**ಚಿಕ್ಕಮಗಳೂರು ವಿಭಾಗದಲ್ಲಿ ಕಾಡಾನೆಗಳ ದಾಳಿಯಿಂದ ಹಾನಿಗೆ ಒಳಗಾದ ಕೃಷಿ ಪ್ರದೇಶಗಳ ವಿವರ ಕೆಳಕಂಡಂತಿದೆ:-**

| ವಲಯ | ದಾಳಿಗೊಳಗಾದ ಪ್ರದೇಶಗಳು |
| --- | --- |
| ಚಿಕ್ಕಮಗಳೂರು | ಅತ್ತಿಗಿರಿ, ಇಂದಾವರ, ಮತ್ತಾವರ, ಕೆ.ಆರ್.ಪೇಟೆ, ಮಲ್ಲೇನಹಳ್ಳಿ. |
| ಮೂಡಿಗೆರೆ | ತತ್ಕೊಳ, ಗೋಣಿಬೀಡು, ಮೂಡಿಗೆರೆ, ಬಣಕಲ್, ಹಳೇಕೋಟೆ, ಭಾರತೀಬೈಲು. |
| ಆಲ್ದೂರು | ಹಾಂದಿ, ಕುಂದೂರು, ಸಾರಗೋಡು, ಕಣತಿ. |
| ಮುತ್ತೋಡಿ | ಮಸಗಲಿ, ಕೊಳಗಾಮೆ, ಜಾಗ, ಶಿರವಾಸೆ, ಮೇಲಿನಹುಲುವತ್ತಿ. |

ಚಿಕ್ಕಮಗಳೂರು ವಿಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡಾನೆ ದಾಳಿಯಿಂದ ಬೆಳೆನಾಶ ಪ್ರಕರಣಗಳಿಗೆ ತಾಲ್ಲೂಕುವಾರು ವಿತರಿಸಲಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ:-

| **ವರ್ಷ** | **ತಾಲ್ಲೂಕು** | **ಬೆಳೆನಷ್ಟ ಮತ್ತು ಆಸ್ತಿನಷ್ಟ** | |
| --- | --- | --- | --- |
| | | **ಪ್ರಕರಣ (ಸಂಖ್ಯೆ)** | **ಪರಿಹಾರದ ಮೊತ್ತ (ರೂ.ಗಳಲ್ಲಿ)** |
| 2019-20 | ಚಿಕ್ಕಮಗಳೂರು | 196 | 20,36,000.00 |
| | ಮೂಡಿಗೆರೆ | 705 | 44,28,000.00 |
| | ಕಡೂರು | - | - |
| | **ಒಟ್ಟು:-** | **901** | **64,64,000.00** |
| 2020-21 | ಚಿಕ್ಕಮಗಳೂರು | 258 | 2,96,000.00 |
| | ಮೂಡಿಗೆರೆ | 524 | 48,08,389.00 |
| | ಕಡೂರು | - | - |
| | **ಒಟ್ಟು:-** | **782** | **51,04,389.00** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

| | | | |
|---|---|---|---|
| 2021-22 | ಚಿಕ್ಕಮಗಳೂರು | 518 | 21,35,868.00 |
| | ಮೂಡಿಗೆರೆ | 1588 | 81,00,000.00 |
| | ಕಡೂರು | - | - |
| **ಒಟ್ಟು:-** | | **2106** | **1,02,35,868.00** |
| 2022-23 | ಚಿಕ್ಕಮಗಳೂರು | 790 | 73,41,051.00 |
| | ಮೂಡಿಗೆರೆ | 955 | 73,05,763.00 |
| | ಕಡೂರು | - | - |
| **ಒಟ್ಟು:-** | | **1745** | **1,46,46,814.00** |

ಪ್ರಸ್ತುತ ಚಿಕ್ಕಮಗಳೂರು ವಿಭಾಗದಲ್ಲಿ 2023-24 ನೇ ಸಾಲಿನಲ್ಲಿ ಪರಿಹಾರ ವಿತರಿಸುವುದು ಬಾಕಿ ಇರುವ ಪ್ರಕರಣಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ:-

| **ವರ್ಷ** | **ತಾಲ್ಲೂಕು** | **ಬೆಳೆನಷ್ಟ ಮತ್ತು ಆಸ್ತಿ ನಷ್ಟ** | |
|---|---|---|---|
| | | **ಪ್ರಕರಣ ಸಂಖ್ಯೆ** | **ಬಾಕಿ ಇರುವ ಪರಿಹಾರದ ಮೊತ್ತ (ರೂ.ಗಳಲ್ಲಿ)** |
| 2023-24 | ಚಿಕ್ಕಮಗಳೂರು | 160 | 10,78,845.00 |
| | ಮೂಡಿಗೆರೆ | 208 | 15,20,815.00 |
| | ಕಡೂರು | - | - |
| **ಒಟ್ಟು:-** | | **368** | **25,99,660.00** |

ಸಂಖ್ಯೆ: ಅಪಜೀ 72 ಎಫ್‌ಡಬ್ಲ್ಯೂಎಲ್ 2023

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು